(ಇ) ಹೌದು. ಆದರೆ, ಅದು ಬಹಳ ಕಡಿಮೆ ಪ್ರಮಾಣದ್ದು. ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳು ಹೆಸರುಗಳನ್ನು ಅನುಕ್ರಮವಾಗಿ ಸೂಚಿಸುತ್ತಿಲ್ಲದಿರುವ ಕೆಲವು ದೂರುಗಳು ಬರುತ್ತಿವೆ, ಅವು ಅತಿ ವಿರಳ.

(ಈ) ಪರಿಸ್ಥಿತಿಯನ್ನು ಸರಿಪಡಿಸಲು ಅಭ್ಯರ್ಥಿಗಳನ್ನು ಗಣಕ ಯಂತ್ರದ ಮೂಲಕ ಆಯ್ಕೆ ಮಾಡಿ ಹೆಸರುಗಳನ್ನು ಅನುಕ್ರಮವಾಗಿ ಸೂಚಿಸಲು ಕ್ರಮ ಕೈಗೊಳ್ಳಲಾಗಿದೆ.

ಹುಬ್ಬಳ್ಳಿ ಪೇಟೆಯಲ್ಲಿ ಬೆಲ್ಲದ ಮೇಲಿನ ಮಾರ್ಕೆಟ್‌ಶುಲ್ಕ ಕುರಿತು

೫೦೬ (ಇ) ಶ್ರೀ ನೀಲಕಂಠ ಗೌಡಪ್ಪ ಪಾಟೀಲ್, (ಶಿಗ್ಗಾಂವ) ಮಾನ್ಯ ಸಹಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಪೇಟೆಯಲ್ಲಿ ಬೆಲ್ಲದ ವಹಿವಾಟಿನ ಮೇಲೆ ಕೃಷಿ ಉತ್ಪನ್ನ ಮಾರಾಟ ಸಮಿತಿಯವರು ವಸೂಲಿ ಮಾಡಬೇಕಾದಂತಹ ಮಾರಾಟ ಶುಲ್ಕವನ್ನು ವಸೂಲು ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹುಬ್ಬಳ್ಳಿಯಲ್ಲಿ ಯಾವ ದಿನಾಂಕದಂದು ಬೆಲ್ಲವನ್ನು ಕ್ರಯವಿಪಡಿಸಿದ ಒಕ್ಕಲುತನ ಹುಟ್ಟುವಳಿಯೆಂದು ಪರಿಗಣಿಸಿದೆ.

ಇ) ಅಂದಿನಿಂದ ಇಲ್ಲಿಯವರೆಗೆ ಬೆಲ್ಲದ ಮೇಲೆ ಎಷ್ಟು ಮೊತ್ತದ ಮಾರಾಟ ಶುಲ್ಕ ಹುಬ್ಬಳ್ಳಿ ಎ.ಪಿ.ಎಂ.ಸಿ.ಗೆ ಬರಬೇಕಾಗಿತ್ತು?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಬಂದಿದೆ.

ಆ) ದಿನಾಂಕ. ೨೨-೭-೧೯೮೨ ರಿಂದ ಬೆಲ್ಲವು ಕ್ರಯಪಡಿಸಿದ ಹುಟ್ಟುವಳಿ ಎಂದು ಘೋಷಿಸಲಾಗಿದ್ದರೂ ಸಹ ಬೆಲ್ಲದ ವ್ಯಾಪಾರಸ್ಥರಿಗೆ ಮಾರುಕಟ್ಟೆ ಪ್ರಾಂಗಣದಲ್ಲಿ ಸ್ಥಳಾವಕಾಶ ಮಾಡಿ ಕೊಡಂವರೆಗೆ ಬೆಲ್ಲದ ಮಾರಾಟವನ್ನು ನಿಯಂತ್ರಣದ ಕಕ್ಷೆಗೆ ತರಲು ಸಾಧ್ಯವಾಗಿಲ್ಲ. ಈಗಿರುವ ಮಾರುಕಟ್ಟೆ ಪ್ರಾಂಗಣದಲ್ಲಿ ಸದರಿ ವ್ಯವಹಾರಸ್ಥರಿಗೆ ಸ್ಥಳಾವಕಾಶ ಮಾಡಿ ಕೊಡಲು ಸಾಧ್ಯವಾಗುವುದಿಲ್ಲವಾದ್ದರಿಂದ ಈಗ ಬೆಲ್ಲದ ವ್ಯವಹಾರ ನಡೆಸುವ ಸ್ಥಳವನ್ನು ಮಾರುಕಟ್ಟೆ ಉಪ ಪ್ರಾಂಗಣವೆಂದು ಘೋಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಬೆಲ್ಲದ ಮಾರಾಟವನ್ನು ನಿಯಂತ್ರಣಗೊಳಿಸಿಲ್ಲವಾದ್ದರಿಂದ, ಈ ಮಾಹಿತಿಯು ದೊರಕುವುದಿಲ್ಲ.

ಹರಿಜನ ಗಿರಿಜನ ವಿದ್ಯಾರ್ಥಿನಿಲಯಗಳು.

೬೭೭(ಉ) ಶ್ರೀಮತಿ ಸುಮಾ ವಸಂತ (ವೀರಾಜಪೇಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಹರಿಜನ ಗಿರಿಜನರಿಗಾಗಿ ಎಲ್ಲೆಲ್ಲಿ, ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಪಟ್ಟಿ ನೀಡುವುದು.

ಆ) ಪ್ರತಿ ವಿದ್ಯಾರ್ಥಿನಿಲಯದಲ್ಲಿ ಈ ವರ್ಷಕ್ಕೆ ಎಷ್ಟೆಷ್ಟು ವಿದ್ಯಾರ್ಥಿಗಳು ಸೇರಿದ್ದಾರೆ.

ಇ) ಎಷ್ಟೇಷ್ಟು ವಿದ್ಯಾರ್ಥಿನಿಲಯಗಳಿಗೆ ಸರ್ಕಾರಿ ಕಟ್ಟಡವಿದೆ ಹಾಗೂ ಎಲ್ಲೆಲ್ಲಿ ಇದೆ.

ಈ) ಕಟ್ಟಡವಿಲ್ಲದ ವಿದ್ಯಾರ್ಥಿನಿಲಯಗಳಿಗೆ ಕಟ್ಟಡ ಒದಗಿಸಲು ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಪಟ್ಟಿ ಲಗತ್ತಿಸಿದೆ.

ಆ) ಲಗತ್ತಿಸಿರುವ ಪಟ್ಟಿಯಲ್ಲಿ ತೋರಿಸಲಾಗಿದೆ.

ಇ) ೧೦ ನಿಲಯಗಳಿಗೆ ಸರ್ಕಾರಿ ಕಟ್ಟಡಗಳಿವೆ. ಎಲ್ಲೆಲ್ಲಿ ಇವೆ ಎಂಬುದಕ್ಕೆ ಪಟ್ಟಿಯಲ್ಲಿ ತೋರಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ಪರಿಶಿಷ್ಟ ಜಾತಿಯವರ ಪೆಟ್ರಿಕ್ ಪೂರ್ವ ಹಾಸ್ಟೆಲ್‌ಗಳ ವಿವರ

ಕ್ರಮ ಸಂಖ್ಯೆ	ವಿದ್ಯಾರ್ಥಿನಿಲಯದ ಸ್ಥಳ	ಮಂಜೂರಾದ ವಿದ್ಯಾರ್ಥಿಗಳ ಒಟ್ಟು ಸ್ಥಾನ	೧೯೮೬-೮೭ರಲ್ಲಿ ಭರ್ತಿಯಾದವರ ಸಂಖ್ಯೆ	ಸರ್ಕಾರಿ ಕಟ್ಟಡ ಅಥವಾ ಬಾಡಿಗೆ ಕಟ್ಟಡ
೧	೨	೩	೪	೫
	೧) ಮಡಕೇರಿ ತಾಲ್ಲೂಕು			
೧	ಪರಿಶಿಷ್ಟ ಜಾತಿ ಬಾಲಕರ ಹಾಸ್ಟೆಲ್, ಮಡಕೇರಿ	೧೦೦	೫೩	ಸರ್ಕಾರಿ ಕಟ್ಟಡ
೨	ಪರಿಶಿಷ್ಟ ಜಾತಿ ಬಾಲಕರ ಹಾಸ್ಟೆಲ್, ಚೆರಂಬಾಣೆ	೫೦	೩೦	ಬಾಡಿಗೆ ಕಟ್ಟಡ
೩	ಪರಿಶಿಷ್ಟ ಜಾತಿ ಬಾಲಕಿಯರ ಹಾಸ್ಟೆಲ್ ಮಡಕೇರಿ	೬೭	೫೧	ಸರ್ಕಾರಿ ಕಟ್ಟಡ
	೨) ಸೋಮವಾರ ಪೇಟೆ, ತಾಲ್ಲೂಕು			
೪	ಪರಿಶಿಷ್ಟ ಜಾತಿ ಬಾಲಕರ ಹಾಸ್ಟಲ್, ಸೋಮವಾರ ಪೇಟೆ	೪೭	೪೪	ಸರ್ಕಾರಿ ಕಟ್ಟಡ
೫	ಪರಿಶಿಷ್ಟ ಜಾತಿ ಬಾಲಕರ ಹಾಸ್ಟಲ್, ಕಂಶಾಲನಗರ	೬೭	೬೭	ಸರ್ಕಾರಿ ಕಟ್ಟಡ
೬	ಪರಿಶಿಷ್ಟ ಜಾತಿ ಬಾಲಕರ ಹಾಸ್ಟಲ್, ಕೂಡ್ಲಿಪೇಟೆ	೨೫	೨೫	ಬಾಡಿಗೆ ಕಟ್ಟಡ
೭	ಪರಿಶಿಷ್ಟ ಜಾತಿ ಬಾಲಕರ ಹಾಸ್ಟಲ್, ಶನಿವಾರ ಸಂತೆ	೨೫	೨೫	ಬಾಡಿಗೆ ಕಟ್ಟಡ
೮	ಪರಿಶಿಷ್ಟ ಜಾತಿ ಬಾಲಕರ ಹಾಸ್ಟಲ್, ಹೆಬ್ಬಾಳೆ	೨೫	೨೫	ಬಾಡಿಗೆ ಕಟ್ಟಡ
೯	ಪರಿಶಿಷ್ಟ ಜಾತಿ ಬಾಲಕರ ಹಾಸ್ಟಲ್ ಕಂಶಾಲನಗರ	೨೫	೨೫	ಬಾಡಿಗೆ ಕಟ್ಟಡ
೧೦	ಪರಿಶಿಷ್ಟ ಜಾತಿ ಬಾಲಕಿಯರ ಹಾಸ್ಟಲ್. ಸೋಮವಾರ ಪೇಟೆ	೧೫	೧೫	ಸರ್ಕಾರಿ ಕಟ್ಟಡ
	೩) ವಿರಾಜ ಪೇಟೆ ತಾಲ್ಲೂಕು			
೧೧	ಪರಿಶಿಷ್ಟ ಜಾತಿ ಬಾಲಕರ ಹಾಸ್ಟಲ್, ವಿರಾಜಪೇಟೆ	೪೭	೨೫	ಬಾಡಿಗೆ ಕಟ್ಟಡ
೧೨	ಪರಿಶಿಷ್ಟ ಜಾತಿ ಬಾಲಕರ ಹಾಸ್ಟಲ್ ಪೊನ್ನಂಪೇಟೆ	೪೦	೨೫	ಬಾಡಿಗೆ ಕಟ್ಟಡ

೧	೨	೩	೪	೫
೧೩	ಪರಿಶಿಷ್ಟ ಜಾತಿ ಬಾಲಕಿಯರ ಹಾಸ್ಟಲ್ ಬಾಳಲೆ	೫೦	೨೫	ಬಾಡಿಗೆ ಕಟ್ಟಡ
೧೪	ಪರಿಶಿಷ್ಟ ಜಾತಿ ಬಾಲಕಿಯರ ಹಾಸ್ಟಲ್ ವಿರಾಜ ಪೇಟೆ	೪೦	೩೮	ಬಾಡಿಗೆ ಕಟ್ಟಡ
೧೫	ಪರಿಶಿಷ್ಟ ಜಾತಿ ಬಾಲಕಿಯರ ಹಾಸ್ಟಲ್, ಪೊನ್ನಂ ಪೇಟೆ	೬೦	೫೯	ಬಾಡಿಗೆ ಕಟ್ಟಡ
	ಒಟ್ಟು	೬೯೩	೫೩೨	

ಕೊಡಗು ಜಿಲ್ಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ಪರಿಶಿಷ್ಟ ವರ್ಗದವರ ಮೆಟ್ರಿಕ್ ಪೂರ್ವ ಹಾಸ್ಟಲ್‌ಗಳ ವಿವರ.

ಕ್ರಮ ಸಂಖ್ಯೆ	ವಿದ್ಯಾರ್ಥಿನಿಲಯದ ಸ್ಥಳ	ಮಂಜೂರಾದ ವಿದ್ಯಾರ್ಥಿಗಳ ಒಟ್ಟಿಟ್ಟ ಸ್ಥಾನ	೧೯೮೬-೮೭ ರಲ್ಲಿ ಭರ್ತಿ ಯಾದವರ ಸಂಖ್ಯೆ	ಸರ್ಕಾರಿ ಕಟ್ಟಡ ಅಥವಾ ಬಾಡಿಗೆ ಕಟ್ಟಡ
೧	೨	೩	೪	೫
	೧) ಸೋಮವಾರ ಪೇಟೆ ತಾಲ್ಲೂಕು			
೧	ಪರಿಶಿಷ್ಟ ವರ್ಗ ಬಾಲಕರ ಹಾಸ್ಟಲ್, ಗೋಣಿಮರೂರು.	೨೫	೨೦	ಸರ್ಕಾರಿ ಕಟ್ಟಡ
	೨) ವಿರಾಜ ಪೇಟೆ ತಾಲ್ಲೂಕು			
೨	ಪರಿಶಿಷ್ಟ ವರ್ಗದ ಬಾಲಕರ ಹಾಸ್ಟಲ್ ಕಲ್ಲಹಳ್ಳಿ	೧೨೦	೪೧	ಸರ್ಕಾರಿ ಕಟ್ಟಡ
೩	ಪರಿಶಿಷ್ಟ ವರ್ಗದ ಬಾಲಕರ ಹಾಸ್ಟಲ್ ತಿತಿಮತಿ.	೭೩	೫೧	ಸರ್ಕಾರಿ ಕಟ್ಟಡ
೪	ಪರಿಶಿಷ್ಟ ವರ್ಗ ಬಾಲಕರ ಹಾಸ್ಟಲ್ ಕಂಟ್ಟ	೮೫	೫೪	ಸರ್ಕಾರಿ ಕಟ್ಟಡ
೫	ಪರಿಶಿಷ್ಟ ವರ್ಗ ಬಾಲಕಿಯರ ಹಾಸ್ಟಲ್ ತಿತಿಮತಿ	೨೫	೨೫	ಬಾಡಿಗೆ ಕಟ್ಟಡ
೬	ಪರಿಶಿಷ್ಟ ವರ್ಗ ಬಾಲಕಿಯರ ಹಾಸ್ಟಲ್ ಕಂಟ್ಟ	೬೫	೫೯	ಸರ್ಕಾರಿ ಕಟ್ಟಡ
	ಒಟ್ಟು	೪೯೩	೨೫೦	

ಈ) ಜಿಲ್ಲೆಯಲ್ಲಿ ಹೊಸದಾಗಿ ೬ ಸ್ಥಳಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಳನ್ನು ಇಲಾಖಾ ವತಿಯಿಂದ ಮಂಜೂರು ಮಾಡಲಾಗಿದ್ದು ೨ ಕಟ್ಟಡಗಳನ್ನು ಎನ್. ಆರ್. ಇ. ಪಿ. ಯಲ್ಲಿ ತೆಗೆದುಕೊಳ್ಳಲಾಗಿದೆ, ಉಳಿದ ೫ ಸ್ಥಳಗಳಲ್ಲಿ ನಿವೇಶನ ಪಡೆದ ನಂತರ ಹಂತ ಹಂತವಾಗಿ ನಿರ್ಮಾಣ ಕೈಗೊಳ್ಳಲಾಗುವುದು.